# ಕುಲಾವಿ ಮತ್ತು ಡಾರ್ವಿನ್!



ಅದೊಂದು ಮುಂಜಾನೆ ಏಳರ ಸಮಯ, ಪಡಸಾಲೆಗೆ ಹಾಕಿದ್ದ ಬಲ್ಬಿನ ವೈರ್‌ಗೆ ಹೆಣೆದಿದ್ದ ಹಳದಿ ಹೂವಕ್ಕಿಯ (purple rumped sunbird) ಗೂಡು ಅಪಾಯಕಾರಿಯಾಗಿ ತೂಗುತ್ತಿತ್ತು. ಗುಬ್ಬಚ್ಚಿಗಳ ಗುಂಪೊಂದು ಆ ಗೂಡಿನ ಮೇಲೆ ದಾಳಿ ನಡೆಸುತ್ತಾ ಅದರ ಎಳೆಗಳನ್ನು ಸಡಿಲಿಸತೊಡಗಿದ್ದವು. ಮೊನ್ನೆಯಷ್ಟೇ ಮೊಟ್ಟೆಗಳೊಡೆದು ಹೊರಬಂದಿದ್ದ ಹಸುಳೆಗಳನ್ನು ಹೊತ್ತಿದ್ದ ಗೂಡು ಇನ್ನೇನು ನೆಲಕ್ಕುದುರುವ ಸಾಧ್ಯತೆ ದಟ್ಟವಾಗಿತ್ತು. ಇದನ್ನು ನೋಡಲಾಗದೇ ಅಸಹಾಯಕತೆಯಿಂದ ಚೀರುತ್ತಿದ್ದ ಹೂವಕ್ಕಿಗಳು ಪಾಪದಂತೆ ಕಂಡವು. ಸರಿ ತಕ್ಷಣವೇ ಗುಬ್ಬಚ್ಚಿಗಳನ್ನು ಉಶ್ ಉಶ್ ಎಂದು ಓಡಿಸಿ ಹೂವಕ್ಕಿಗಳು ಗೂಡಿಗೆ ಮರಳಲು ಅನುವು ಮಾಡಿಕೊಟ್ಟೆ. ಹಕ್ಕಿಗಳು ಮರಿಗಳಿಗೆ ತುತ್ತುಣಿಸುವುದನ್ನು ಕಂಡು ಸಮಾಧಾನವಾಯಿತು.



ಆದರೆ ಕೆಲಹೊತ್ತಿನ ನಂತರ ಮತ್ತೆ ಬಂದ ಗುಬ್ಬಚ್ಚಿಗಳು ಗೂಡಿನ ಮೇಲೆ ದಾಳಿಗೆ ಮುಂದಾದವು.

ಆಗ ನಿಜಕ್ಕೂ ಪೇಚಿಗೆ ಸಿಲುಕಿದ್ದೆ. ಇಡೀ ದಿನ ಗೂಡು ಕಾಯುವುದು ಅಸಾಧ್ಯವಾದ ಕಾರ್ಯವಾಗಿತ್ತು. ಇದಕ್ಕೆ ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನವಾಗಿ ಗೂಡು ಬೀಳದಿರಲೆಂದು ಬಟ್ಟೆಯೊಂದನ್ನು ಅದರ ಬುಡದಿಂದ ಮೇಲ್ಮುಖವಾಗಿ ಒಳಗಿರುವ ಮರಿಗಳಿಗೆ ತೊಂದರೆಯಾಗದಂತೆ ಕಟ್ಟಿದೆ. ಪುಟ್ಟ ಮಕ್ಕಳಿಗೆ ಕಟ್ಟುವ ಕುಲಾವಿಯಂತಾದ ಗೂಡನ್ನು ಹೂವಕ್ಕಿಗಳು ಒಪ್ಪಿದವು. ಅಲ್ಲಿಂದ ಕೆಲವು ವಾರಗಳವರೆಗೆ ಗೂಡಿಗೆ ಯಾವ ಧಕ್ಕೆಯೂ ಆಗದೇ ಮರಿಗಳು ಬಲಿತು ನಿಸರ್ಗದೊಂದಿಗೆ ಬೆರೆತವು. ಮೇಲ್ನೋಟಕ್ಕೆ ಸಾರ್ಥಕದಂತೆ ಕಾಣುವ ಈ ಕೆಲಸ ನಿಸರ್ಗದ ದೃಷ್ಟಿಯಿಂದ ಅಪರಾಧವಾಗಿತ್ತು. ಹೌದು ನಿಸರ್ಗದಲ್ಲಿ ನಡೆಯುವ ಯಾವುದೇ ವಿದ್ಯಮಾನಗಳಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರ ಮನುಷ್ಯನಿಗಿಲ್ಲ. ಇಲ್ಲಿ ಗುಬ್ಬಚ್ಚಿಗಳು ಅಸೂಯೆ ಹೊತ್ತ ಜೀವಿಗಳೂ ಅಲ್ಲ. ಹೂವಕ್ಕಿಗಳು ಅಮಾಯಕತೆಯ ಪ್ರತಿನಿಧಿಗಳೂ ಅಲ್ಲ. ಇದು ಕೇವಲ ಉಳಿವಿಗಾಗಿ ಹೋರಾಟ ಮತ್ತು ಉಳಿಯುವಿಕೆ ಅಷ್ಟೇ. ಗುಬ್ಬಚ್ಚಿಗಳು ಗೂಡಿಡಲು ಬೇಕಾದ ಕಚ್ಚಾವಸ್ತುಗಳನ್ನು ಹೂವಕ್ಕಿಯ ಗೂಡಿನಿಂದ ಪಡೆಯಲು ನಡೆಸಿದ ಹೋರಾಟವೇ ಈ ಘಟನೆಯ ಹೂರಣವಷ್ಟೆ.





—ಮಹೇಶ್ವರ ಹುರುಕಡ್ಲಿ,
ಬಾಚಿಗೊಂಡನಹಳ್ಳಿ



# ಸೋಂದಾದ ಪುರಾತನ ಧ್ವಜಸ್ತಂಭ

ಶಿರಸಿ ತಾಲ್ಲೂಕಿನ ‘ಸೋಂದಾ’ ಪ್ರದೇಶವು ಐತಿಹಾಸಿಕ ಮತ್ತು ಧಾರ್ಮಿಕ ಹಿನ್ನೆಲೆಯುಳ್ಳದ್ದಾಗಿದ್ದು, ಅನೇಕ ಪುರಾತನ ಶಿಲಾದೇಗುಲಗಳನ್ನು ಹೊಂದಿದೆ. ಒಂದು ಕಾಲದಲ್ಲಿ ಸೋಂದೆ ಅರಸರ ರಾಜಧಾನಿ ಎನಿಸಿ, ವೈಭವದ ದಿನಗಳನ್ನು ಕಂಡಿದೆ. ಸುಧಾಪುರ, ಸೋಮಧಾಪುರ, ಸೋದೆ, ಸ್ವಾದಿ ಮೊದಲಾದ ಹೆಸರುಗಳಿಂದ ಪ್ರಸಿದ್ಧಿ ಪಡೆದ ಈ ಭಾಗವನ್ನು ಈಗ ಸೋಂದಾ ಎಂದು ಕರೆಯುತ್ತಾರೆ. ಈ ಪ್ರದೇಶವನ್ನು 500 ವರ್ಷಗಳ ಹಿಂದೆ ಸುಮಾರು ಒಂಬತ್ತು ಅರಸರು ಆಳಿದ್ದಾರೆ ಎನ್ನುತ್ತದೆ ಇಲ್ಲಿನ ಇತಿಹಾಸ.

ಸೋಂದಾ ಪ್ರದೇಶದಲ್ಲಿ ಅನೇಕ ಪ್ರಾಚೀನ ಶಿಲಾದೇಗುಲಗಳು ಇವೆ. ಸೋದೆ ಸದಾಶಿವ ದೇವಸ್ಥಾನಗಳಲ್ಲಿನ ಶಿಲ್ಪಕಲೆ, ಶಿಲಾ ಕೆತ್ತನೆಗಳು, ಏಕಶಿಲಾ ಧ್ವಜಸ್ತಂಭ, ಆ ಕಾಲದ ಕಲೆಯ ಸೊಬಗಿಗೆ ಸಾಕ್ಷಿಯಾಗಿ ಈಗಲೂ ಉಳಿದಿವೆ.

ಮುತ್ತಿನಕೆರೆ ಮುಂಭಾಗದಲ್ಲಿ ಚೌಕಾರದ ಪೀಠದ ಮೇಲೆ ಏಕಶಿಲೆಯ ಧ್ವಜಕಂಬವು ಸುತ್ತಲಿನ ಹಸಿರು ಮರಗಳ ನಡುವಲ್ಲಿ ಆಕರ್ಷಕವಾಗಿ ನಿಂತು ಗಮನಸೆಳೆಯುತ್ತಿದೆ. ಧ್ವಜಕಂಬಕ್ಕೆ ಕೆತ್ತಿದ ನಾಗಬಂಧ, ಹಂಸಗಳ ಸಾಲು, ಬಳ್ಳಿಯಾಕಾರದ ಕೆತ್ತನೆಯು ಆಕರ್ಷಕವಾಗಿದೆ. ಐದುನೂರು ವರ್ಷಗಳ ಹಿಂದೆ ಯಾವುದೇ ಸುಧಾರಿತ ಯಂತ್ರಗಳ ನೆರವಿಲ್ಲದೆಯೂ, ಕೇವಲ ಮಾನವ ಶ್ರಮದಲ್ಲಿ ನಿಲ್ಲಿಸಿದ ದೇಗುಲದ ಮುಂದಿನ ಧ್ವಜಕಂಬಗಳು ಒಂದು ವಿಸ್ಮಯವಾಗಿ ಕಾಣುತ್ತವೆ.

—ಅರ್ಚನಾ ಜಿ. ಬೊಮ್ನಳ್ಳಿ, ಶಿರಸಿ